# ಕರ್ನಾಟಕ ಸರ್ಕಾರ

## ಕ್ಷೇತ್ರ ಶಿಕ್ಷಣಾಧಿಕಾರಿಗಳವರ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ.

## ದಾವಣಗೆರೆ ಉತ್ತರ ವಲಯ

---

ಸಂಖ್ಯೆ : ಆ3 : ಖಾ.ಅನುರ/ಪ್ರಾ.ಶಾ. : ಮನ./ 42/ 2019-20 .                ದಿನಾಂಕ : 02-11-2019

: ಜ್ಞಾಪನ :

ವಿಷಯ :- ಮನ್ನಣೆ ನವೀಕರಣದ ಬಗ್ಗೆ

ಉಲ್ಲೇಖ :- 1) ಸರ್ಕಾರಿ ಆದೇಶ ಸಂ : ಇಡಿ- 515 : ವಿವಿಧ

2) ಆಯುಕ್ತರು ಸಾ.ಶಿ.ಇ. ಬೆಂಗಳೂರು ಇವರ ಸುತ್ತೋಲೆ 1. ಸಿ8

(4) ಶಾ.ಶಿ.ಅ. ಮಾನ್ಯತೆ

3) ಮಾನ್ಯ ನಿರ್ದೇಶಕರು [ಪ್ರಾ.ಶಿ.] ರವರ ಜ್ಞಾಪನ ಸಂ: ಸಿ7[2]ಪ್ರಾಶಿಅ/ಇತರೆ 32/17-18 ದಿ: 01-02-2018

4) ಮಾನ್ಯ ಉಪನಿರ್ದೇಶಕರು [ಆ] ಸಾ.ಶಿ.ಇಲಾಖೆ, ದಾವಣಗೆರೆ ರವರ ಜ್ಞಾಪನ ಪತ್ರ ಸಂ: ಅನು4/ಖಾ.ಪ್ರಾ.ಶಾ/ಹೊ.ಶಾ.ನೊಂ. 65/2016-2017 ದಿನಾಂಕ: 31-03-2017

5) ಕಾರ್ಯದರ್ಶಿ, ಶ್ರೀ.ಚೈತನ್ಯ ಟೆಕ್ನೋ ಸ್ಕೂಲ್, ಡಿ.ಸಿ.ಎಂ.ರೈಲ್ವೆ ಬ್ರಿಡ್ಜ್ ಹಿಂಭಾಗ, ಪಿ.ಬಿ.ರಸ್ತೆ, ದಾವಣಗೆರೆ ಇವರ ಪತ್ರ ಸಂ: ದಿ:_01-10.-2019

• • • • • •

| | | |
|---|---|---|
| 1 | ಶಾಲೆಯ ನೊಂದಣಿ ಸಂಖ್ಯೆ | 14783/2019-20 |
| 2 | ಆಡಳಿತ ಮಂಡಳಿಯ ಹೆಸರು ಮತ್ತು ವಿಳಾಸ | ಶ್ರೀ.ಚೈತನ್ಯ ಟೆಕ್ನೋ ಸ್ಕೂಲ್, ಡಿ.ಸಿ.ಎಂ.ರೈಲ್ವೆ ಬ್ರಿಡ್ಜ್ ಹಿಂಭಾಗ, ಪಿ.ಬಿ.ರಸ್ತೆ, ದಾವಣಗೆರೆ |
| 3 | ಶಾಲೆಯ ಹೆಸರು ಮತ್ತು ವಿಳಾಸ | ಶ್ರೀ.ಚೈತನ್ಯ ಟೆಕ್ನೋ ಸ್ಕೂಲ್, ಡಿ.ಸಿ.ಎಂ.ರೈಲ್ವೆ ಬ್ರಿಡ್ಜ್ ಹಿಂಭಾಗ, ಪಿ.ಬಿ.ರಸ್ತೆ, ದಾವಣಗೆರೆ ಉತ್ತರ ವಲಯ |
| 4 | ತಾತ್ಕಾಲಿಕ ಪ್ರಮಾಣ ಪತ್ರ ಅನುಭವಿಸಿರುವ ಬಗ್ಗೆ ಉಲ್ಲೇಖ | ಉಪನಿರ್ದೇಶಕರು [ಆಡಳಿತ] |
| 5 | ಶಾಲೆಯ ಪ್ರಥಮ ಮನ್ನಣೆ ಪಡೆದ ಆದೇಶ ಸಂಖ್ಯೆ ದಿನಾಂಕ ಮಂಜೂರಾತಿ ಪ್ರಾಧಿಕಾರ | ಕ್ಷೇತ್ರ ಶಿಕ್ಷಣಾಧಿಕಾರಿಗಳು |
| 6 | ಈಗಾಗಲೇ ಮನ್ನಣೆ ನವೀಕರಿಸಿರುವ ವರ್ಷ | 2019-20 |
| 7 | ಈಗ ಮನ್ನಣೆ ನವೀಕರಿಸಿರುವ ವಿವರ ಈ ಕೆಳಕಂಡಂತಿರುತ್ತದೆ. | |

| ವರ್ಷ-ಅವಧಿ | ತರಗತಿ | ವಿಭಾಗ | ಮಾಧ್ಯಮ | ಅನುದಾನ ಸಹಿತ/ ರಹಿತ | ಷರಾ |
|---|---|---|---|---|---|
| 2019-2020 ಪ್ರಥಮ ಮನ್ನಣೆ ಹಾಗೂ 2023-2024 ರವರೆಗೆ ಮನ್ನಣೆ ನವೀಕರಣ | 1 ರಿಂದ 8ನೇ ತರಗತಿ | ಒಂದು | ಆಂಗ್ಲ ಮಾಧ್ಯಮ | ಅನುದಾನ ರಹಿತವಾಗಿ | |

<u>ಷರತ್ತುಗಳು :-</u>

01 ಸದರಿ ಶಾಲೆಯ ಮನ್ನಣೆ ನವೀಕರಣವು ಕರ್ನಾಟಕ ಶಿಕ್ಷಣ ಮಸೂದೆ 1983 ರ ಪರಿಚ್ಛೇದ 36 ಮತ್ತು 38 ರ ಪ್ರಕಾರ ಖಾಲಿ ಮನ್ನಣೆ ಪಡೆಯುತ್ತಿರುವ ಶಾಲೆಗಳಿಗೆ ಸರ್ಕಾರದ ಅಧಿಸೂಚನೆ ಕ್ರಮ ಸಂಖ್ಯೆ : ಇಡಿ 131- ವಿವಿಧ 98 ದಿನಾಂಕ : 04-11-1999 ರ ಅನ್ವಯ ಈ ಕೆಳಕಾಣಿಸಿದ ನಿಬಂಧನೆಗೊಳಪಟ್ಟು ಸದರಿ ಶಾಲೆಗೆ ಮನ್ನಣೆ ನವೀಕರಿಸಿದೆ.

02 ಸದರಿ ಶಾಲೆಯು ಗಾರ್ನಿಂಗ್ ಕೌನ್ಸಿಲ್ ಅಥವಾ ಸದರಿ ಶಾಲೆಯ ವಿದ್ಯಾ ಸಂಸ್ಥೆಯ ವ್ಯವಸ್ಥಾಪಕರ ಹೆಸರಿನಲ್ಲಿ ನಿವೇಶನ ನೊಂದಣಿಯಾಗಿರಬೇಕು ಮತ್ತು ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ ನೊಂದಾವಣೆ ಮತ್ತು ಪಠ್ಯಕ್ರಮ ನಿಯಮ) 1995 ರ ನಿಯಮ 4 ಮತ್ತು 5 ರಲ್ಲಿ ನಮೂದಿಸಿರುವಂತೆ ಶಾಲೆಗೆ ಸಂಬಂಧಿಸಿದ ನಿವೇಶನದಲ್ಲಿ ಶಾಲೆ ನಡೆಸಲು ಬೇಕಾಗುವ ಕಟ್ಟಡ ವ್ಯವಸ್ಥೆ ಕಲ್ಪಿಸಲು ಸಾಕಷ್ಟು ಸ್ಥಳಾವಕಾಶ ಹೊಂದಿರತಕ್ಕದ್ದು.

03 ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ ನೊಂದಾವಣೆ ಮತ್ತು ಪಠ್ಯಕ್ರಮ) ನಿಯಮ 1995 ರ ನಿಯಮ 4 5 6 ಮತ್ತು 8 ರಲ್ಲಿ ವಿವರಿಸಿರುವಂತೆ ಉತ್ತಮ ಕಟ್ಟಡ ಸೌಲಭ್ಯ ಸಾಕಷ್ಟು ಸ್ಥಳಾವಕಾಶದೊಂದಿಗೆ ನೀರಿನ ಸೌಕರ್ಯ ಶೌಚಾಲಯ ಸೌಕರ್ಯ ಮತ್ತು ಇತರೆ ಸೌಕರ್ಯಗಳನ್ನು ಹೊಂದಿರತಕ್ಕದ್ದು.

04 ಸಾಕಷ್ಟು ಪ್ರಯೋಗಾಲಯ ಉಪಕರಣ, ಗ್ರಂಥಾಲಯ ಸೌಕರ್ಯ, ಪೀಠೋಪಕರಣ, ಕ್ರೀಡೋಪಕರಣ, ಭೂಪಟಗಳು ನಕ್ಷೆಗಳು ಹಾಗೂ ಇತರೆ ಬೋಧನೋಪಕರಣಗಳನ್ನು ಒದಗಿಸತಕ್ಕದ್ದು.

05 ಸರ್ಕಾರವು ಕಾಲಕಾಲಕ್ಕೆ ನಿಗಧಿಪಡಿಸಿರುವಂತೆ ಅಗತ್ಯವಾಗಿ ಬೇಕಾಗುವ ತರಬೇತಿ ಹೊಂದಿರುವ ಸಿಬ್ಬಂದಿ

ವರ್ಗದವರನ್ನು ಒದಗಿಸತಕ್ಕದ್ದು

06 ಕರ್ನಾಟಕ ಶಿಕ್ಷಣ ಮಸೂದೆ ನಿಯಮ 1983 ರ ಪರಿಚ್ಛೇದ 42 ರನ್ವಯ ವ್ಯವಸ್ಥಾಪಕ ಸಮಿತಿ ಅಥವಾ ಗೌರ್ನಿಂಗ್ ಕೌನ್ಸಿಲ್ ರಚಿಸಿರಬೇಕು.

07 ಕರ್ನಾಟಕದ ಶಿಕ್ಷಣ ಮಸೂದೆ ನಿಯಮ 1983 ರನ್ವಯ ಹಾಗೂ ಸರ್ಕಾರದ ಅಧಿಸೂಚನೆಗಳನ್ವಯ ಭದ್ರತಾ ಠೇವಣಿ ಹಣವನ್ನು ಒದಗಿಸತಕ್ಕದ್ದು.

08 ಕರ್ನಾಟಕ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ ಹಾಗೂ ನೊಂದಾವಣೆ) ನಿಯಮ 1997 ರ ನಿಯಮ 4 ರ ಅನ್ವಯ ಆರ್ಥಿಕ ಸಾಮರ್ಥ್ಯ ಹೊಂದಿರತಕ್ಕದ್ದು ಹಾಗೂ ಸಂಬಂಧಿಸಿದ ದಾಖಲೆಗಳನ್ನು ಒದಗಿಸತಕ್ಕದ್ದು

09 ಕರ್ನಾಟಕ ಶಿಕ್ಷಣ ಮಸೂದೆ ನಿಯಮ 1983 ರ ನಿಯಮದಂತೆ ವಿದ್ಯಾರ್ಥಿಗಳಿಗೆ ಆಟದ ಮೈದಾನದ ಸೌಲಭ್ಯ ಒದಗಿಸತಕ್ಕದ್ದು.

10 ಸರ್ಕಾರದಿಂದ ಕಾಲಕಾಲಕ್ಕೆ ನಿಗಧಿಪಡಿಸುವ ನಿಯಮದಡಿಯಲ್ಲಿ ದಾಖಲಾತಿ ಮತ್ತು ಇತರೆ ಶುಲ್ಕ ವಸೂಲಾತಿ ನಿಯಮಗಳನ್ನು ಅನುಸರಿಸತಕ್ಕದ್ದು.

11 ಪಠ್ಯಕ್ರಮ ಪಠ್ಯಪುಸ್ತಕ ಶಿಕ್ಷಣ ಮಾಧ್ಯಮ ಪರೀಕ್ಷಾ ನಿಯಮದಡಿಯಲ್ಲಿ ಕಾರ್ಯನಿರ್ವಹಿಸುವ ದಿನಗಳು, ಕಾರ್ಯನಿರ್ವಹಿಸುವ ಅವಧಿಗಳು, ಮನೆಕೆಲಸ ಇತ್ಯಾದಿಗಳನ್ನು ಸರ್ಕಾರದಿಂದ ಸೂಚಿಸಿದ ಮಾದರಿಯಲ್ಲಿಯೇ ಅನುಸರಿಸತಕ್ಕದ್ದು

12 ಶಾಲೆಯಲ್ಲಿ ಎಲ್ಲರಿಗೂ ಒಪ್ಪಿಗೆಯಾಗುವಂತಹ ಮುಕ್ತವಾದ ಸ್ಥಳದ ನಿವೇಶನದಲ್ಲಿ ಪ್ರಾರಂಭಿಸತಕ್ಕದ್ದು.

13 ಶಾಲೆಯಲ್ಲಿನ ಎಲ್ಲಾ ವಹಿಗಳನ್ನು ಹಾಗೂ ದಾಖಲೆಗಳನ್ನು ಶಿಕ್ಷಣ ಮಸೂದೆ ನಿಯಮ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ನಿರ್ವಹಿಸತಕ್ಕದ್ದು

14 ಪ್ರಾಥಮಿಕ ಶಾಲೆಗಳಲ್ಲಿ ಪ್ರತಿ ತರಗತಿಗಳ ಕನಿಷ್ಠ ಹಾಜರಾತಿ ಶೇಕಡ 40 ರಂತೆ ಹೊಂದಿರತಕ್ಕದ್ದು ಹಾಗೂ ಕಡ್ಡಾಯವಾಗಿ ನಿರ್ವಹಿಸತಕ್ಕದ್ದು.

15 ಆಡಳಿತ ಮಂಡಳಿಯವರು ಜಿಲ್ಲಾ ನೊಂದಾವಣೆ ಅಧಿಕಾರಿಗಳಿಂದ ಪ್ರತಿ ವರ್ಷ ಸಂಘದ ಹಾಗೂ ಸಂಘದ ಸರ್ವಸದಸ್ಯರ ಪಟ್ಟಿಗೆ ನವೀಕರಣವನ್ನು ಪಡೆದು ದಾಖಲೆಗಳನ್ನು ಒದಗಿಸತಕ್ಕದ್ದು.

<u>ಪ್ರತಿ ನೊಂದಾಯಿತ ವಿದ್ಯಾ ಸಂಸ್ಥೆಗಳು ಮನ್ನಣೆ ನವೀಕರಣ ಬಯಸುವಲ್ಲಿ ಈ ಕೆಳಕಾಣಿಸಿದ ನಿಬಂಧನೆಗಳಿಗೆ ಮುಚ್ಚಳಿಕೆ ನೀಡತಕ್ಕದ್ದು.</u>

01 ಕರ್ನಾಟಕ ಶಿಕ್ಷಣ ಮಸೂದೆ ನಿಯಮ ಹಾಗೂ ಅಧಿಸೂಚನೆ ನಿಯಮದಲ್ಲಿ ತಿಳಿಸಿರುವ ಅವಕಾಶಗಳ ಬಗ್ಗೆ ಪಾಲಿಸಲು ಬದ್ಧರಾಗಿರಬೇಕು.

02 ಸರ್ಕಾರ ಅಥವಾ ಸಾರ್ವಜನಿಕ ಶಿಕ್ಷಣ ಇಲಾಖೆಯ ವತಿಯಿಂದ ನಡೆಸುವ ಪರೀಕ್ಷೆಗಳನ್ನು ತರಬೇತಿ ಕ್ರಮಗಳನ್ನು ನಡೆಸಲು ಮತ್ತು ಜನಗಣತಿ ಕಾರ್ಯಕ್ರಮ ಇಲಾಖೆ ಕಾರ್ಯಕ್ರಮ ಹಾಗೂ ಇತರೆ ಕಾರ್ಯಕ್ರಮಗಳನ್ನು ನಡೆಸುವ ಸಂದರ್ಭದಲ್ಲಿ ಶಿಕ್ಷಕರ ಸೇವೆಯನ್ನು ಇಲಾಖೆ ಬಯಸಿದಲ್ಲಿ ಕಡ್ಡಾಯವಾಗಿ ನೀಡಬೇಕು.

03 ಎಲ್ಲಾ ಹಂತಗಳಲ್ಲಿ ಶಾಲೆಯು ಜಾತ್ಯಾತೀತವಾಗಿರಬೇಕು ಶಾಲೆಯ ಅವಧಿಯಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಬಾರದು ಹಾಗೂ ಅಂತಹ ಕಾರ್ಯಕ್ರಮಗಳಿಗೆ ವಿದ್ಯಾರ್ಥಿಗಳ ಹಾಜರಾತಿ ಕಡ್ಡಾಯವಾಗಿರತಕ್ಕದ್ದಲ್ಲ.

04 ಕರ್ನಾಟಕ ಶಿಕ್ಷಣ ಮಸೂದೆ ನಿಯಮ ಹಾಗೂ ಅಧಿನಿಯಮಗಳಲ್ಲಿ ತಿಳಿಸಿರುವಂತೆ ಎಲ್ಲಾ ರೀತಿಯ ಸೌಕರ್ಯಗಳನ್ನು ಕಾಲಕಾಲಕ್ಕೆ ಬದಲಾವಣೆಯಾದಂತೆ ಒದಗಿಸತಕ್ಕದ್ದು.

05 ಶಾಲೆಯನ್ನು ನೋಂದಾಯಿಸಿದ ಆಧಾರದ ಮೇರೆಗೆ ಮನ್ನಣೆ ನವೀಕರಣದ ಹಕ್ಕನ್ನು ಪ್ರತಿಪಾದಿಸಲು ಅವಕಾಶವಿರುವುದಿಲ್ಲವೆಂದು ತಿಳಿಯತಕ್ಕದ್ದು.

06 ಸರ್ಕಾರದಿಂದಾಗಲಿ ಅಥವಾ ಸಕ್ಷಮ ಪ್ರಾಧಿಕಾರಿಯವಿಂದ ಕಾಲ ಕಾಲಕ್ಕೆ ಹೊರಡಿಸಲಾಗುವ ಆದೇಶಗಳನ್ನು ಹಾಗೂ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಉತ್ತರ ವಲಯ, ದಾವಣಗೆರೆ

ಪ್ರತಿಯನ್ನು :-

1. ಕಾರ್ಯದರ್ಶಿಗಳು, ಶ್ರೀ.ಚೈತನ್ಯ ಟೆಕ್ನೋ ಸ್ಕೂಲ್, ಡಿ.ಸಿ.ಎಂ.ರೈಲ್ವೆ ಬ್ರಿಡ್ಜ್ ಪಿ.ಬಿ.ರಸ್ತೆ, ದಾವಣಗೆರೆ :
2. ಮುಖ್ಯೋಪಾಧ್ಯಾಯರು, ಶ್ರೀ.ಚೈತನ್ಯ ಟೆಕ್ನೋ ಸ್ಕೂಲ್, ಡಿ.ಸಿ.ಎಂ.ರೈಲ್ವೆ ಬ್ರಿಡ್ಜ್ ಪಿ.ಬಿ.ರಸ್ತೆ, ದಾವಣಗೆರೆ ಉತ್ತರ ವಲಯ
3. ಮಾನ್ಯ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ದಾವಣಗೆರೆ ರವರ ಅವಗಾಹನೆಗಾಗಿ ಸಲ್ಲಿಸಿದೆ.
4. ಜ್ಞಾಪನ ಕಡತಕ್ಕೆ / ಕಚೇರಿ ಪ್ರತಿ